ಉಳಿದ 20 ನಗರಗಳಲ್ಲಿ ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳಿಗಾಗಿ ಖರ್ಚು ಮಾಡಿರುವುದಿಲ್ಲ.

ಇ) ಒಟ್ಟು 3 ನೀರು ಸರಬರಾಜಿನ ಯೋಜನೆಗಳು ಸರ್ಕಾರದ ಮುಂದಿವೆ.

ಈ) ಉದ್ಭವಿಸುವುದಿಲ್ಲ.

1471 (1822) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೈಸೂರು ನಡುವೆ ನಿರ್ಮಿಸಲಾಗುತ್ತಿರುವ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆ ಯಾವ ಹಂತದಲ್ಲಿದೆ; ಇದುವರೆವಿಗೂ ಎಷ್ಟು ಕಿ.ಮೀ. ರಸ್ತೆ ನಿರ್ಮಾಣವಾಗಿದೆ;

ಆ) ಈ ಯೋಜನೆ ಪೂರ್ಣಗೊಳ್ಳಲು ಇನ್ನೂ ಎಷ್ಟು ಸಮಯಾವಕಾಶದ ಅಗತ್ಯವಿದೆ;

ಇ) ಸರ್ಕಾರದಿಂದ ನೈಸ್ ಸಂಸ್ಥೆಗೆ ಈ ವಿಷಯದಲ್ಲಿ ಯಾವ ಯಾವ ನೆರವನ್ನು ನೀಡಲಾಗುತ್ತಿದೆ;

ಈ) ಈ ಯೋಜನೆಗೆ ಇನ್ನೂ ಅಗತ್ಯವಿರುವ ಭೂಮಿಯನ್ನು ನೀಡುವಂತೆ ಸರ್ವೋಚ್ಚ ನ್ಯಾಯಾಲಯವು ಸೂಚಿಸಿರುವುದು ನಿಜವಲ್ಲವೇ;

ಉ) ನ್ಯಾಯಾಲಯದ ನಿರ್ದೇಶನ ಪ್ರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಊ) ಈ ವಿಷಯದಲ್ಲಿ ವಿಳಂಬ ಮಾಡಿದಲ್ಲಿ ನ್ಯಾಯಾಂಗ ನಿಂದನೆಯಾಗುವುದಿಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬೆಂಗಳೂರು ಮೈಸೂರು ನಡುವೆ ನಿರ್ಮಿಸಲಾಗುತ್ತಿರುವ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆಯು ಮೊದಲ ಹಂತದ ನಿರ್ಮಾಣದ ಹಂತದಲ್ಲಿದೆ. ಯೋಜನಾ ರಸ್ತೆಗಳ ಕಾಮಗಾರಿ ಕಾರ್ಯ ಪ್ರಗತಿಯಲ್ಲಿದೆ.

ಆ) ಯೋಜನಾ ಕಾಮಗಾರಿಯು ಪ್ರಗತಿಯಲ್ಲಿದ್ದು ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.

ಇ) ಖಾಸಗಿ ಜಮೀನನ್ನು ಭೂಸ್ವಾಧೀನಗೊಳಿಸಿ ನೈಸ್ ಸಂಸ್ಥೆಗೆ ಹಸ್ತಾಂತರಿಸುವುದು, ಸರ್ಕಾರಿ ಜಮೀನನ್ನು ಲೀಸ್/ ಸೇಲ್‌ನಂತೆ ನೈಸ್ ಸಂಸ್ಥೆಗೆ ಹಸ್ತಾಂತರಿಸುವುದು ಸೇರಿದಂತೆ ಫ್ರೇಮ್‌ವರ್ಕ ಒಪ್ಪಂದದ ಕಂಡಿಕೆಗಳಂತೆ ಸರ್ಕಾರದ ವತಿಯಿಂದ ನೈಸ್ ಸಂಸ್ಥೆಗೆ ನೆರವನ್ನು ನೀಡಲಾಗುತ್ತಿದೆ.

ಈ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ20–04–2006 ರಂದು ಆದೇಶ ನೀಡಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ದಿನಾಂಕ 03–05–2005 ಅನ್ನು ಎತ್ತಿ ಹಿಡಿದು ಆದೇಶ ನೀಡಿರುತ್ತದೆ. ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ 03–05–2005 ರಂದು ನೀಡಿರುವ ಆದೇಶದಲ್ಲಿ ಯೋಜನೆಯನ್ನು ಮೂಲತಃ ಯೋಜಿಸಿದಂತೆ ಮತ್ತು ಹಿಂದಿನ ಶ್ರೀ ಸೋಮಶೇಖರ ರೆಡ್ಡಿಯವರ ದಾವೆಯ ತೀರ್ಪಿನಂತೆ ನಿರ್ವಹಿಸಲು ಹಾಗೂ ಫ್ರೇಂವರ್ಕ್ ಒಪ್ಪಂದವನ್ನು ಕಾರ್ಯಗತಗೊಳಿಸಲು ಆದೇಶಿಸಿರುತ್ತದೆ.

ಉ) ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲು ಸರ್ಕಾರವು ಬದ್ಧವಾಗಿರುತ್ತದೆ. ಅದರಂತೆ ಕ್ರಮಕೈಗೊಳ್ಳಲು ಸಹಕರಿಸುವಂತೆ ನೈಸ್ ಸಂಸ್ಥೆಗೆ ತಿಳಿಸಲಾಗಿದೆ.

ಊ) ಈ ವಿಷಯದಲ್ಲಿ ಸರ್ಕಾರದ ವತಿಯಿಂದ ಯಾವುದೇ ವಿಳಂಬ ಆಗಿರುವುದಿಲ್ಲ.

1474 (2081) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಯೋಜನೆಯಿಂದ ಈ ಮೊದಲು ಸವದತ್ತಿ ಮಲಪ್ರಭಾ ಜಲಾಶಯದಿಂದ ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಿಗೆ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದು ಈಗ ಅಮ್ಮಿನಭಾವಿಗೆ ಹಸ್ತಾಂತರಿಸಿದ್ದರಿಂದ ಸವದತ್ತಿ ನಗರದಲ್ಲಿ (ಯಲ್ಲಮ್ಮ ಗುಡ್ಡಕ್ಕೆ ಹೋಗುವ ದಾರಿಯಲ್ಲೆ) ನಿರ್ಮಿಸಿದ ಎಲ್ಲ ಕಟ್ಟಡಗಳನ್ನು ಯಾರೂ ಉಪಯೋಗ ಮಾಡದೇ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;